(7)

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 330ರಡಿ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ.

:ವಿಷಯ:

**1995ರ ನಂತರ ಪ್ರಾರಂಭವಾಗಿರುವ ಅನುದಾನರಹಿತ ಕನ್ನಡ ಮಾಧ್ಯಮ ಶಾಲಾ ಕಾಲೇಜುಗಳ ಬೋಧಕ/ಬೋಧಕೇತರರಿಗೆ ಸೇವಾ ಭದ್ರತೆ ಇಲ್ಲದೆ ಇರುವುದು ಮತ್ತು ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಸರ್ಕಾರದ ಉಚಿತ ಸೌಲಭ್ಯಗಳು ದೊರೆಯದೆ ಇರುವುದೆ ಇರುವುದರಿಂದ ಶಾಲೆಗಳನ್ನು ಮುಚ್ಚುವ ಪರಿಸ್ಥಿತಿ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಪ್ರಸ್ತಾಪಿಸಿರುತ್ತಾರೆ.**

:ಉತ್ತರ:

1) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 59 ಪಿಎಂಸಿ 2006, ದಿನಾಂಕ:06.10.2007 ಮತ್ತು ಇಡಿ 217 ಪಿಎಂಸಿ 2008, ದಿನಾಂಕ:08.09.2008ರನ್ವಯ 1987-88 ರಿಂದ 1994-95ರ ಶೈಕ್ಷಣಿಕ ಅವಧಿಯಲ್ಲಿ ಪ್ರಾರಂಭಿಸಿ ಯಾವುದೇ ವಿಚ್ಛಿನ್ನತೆಯಿಲ್ಲದೇ ಸತತವಾಗಿ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಅವಕಾಶ ಕಲ್ಪಿಸಲಾಗಿದೆ.

2) 1995ರ ನಂತರ ಪ್ರಾರಂಭವಾದ ಅನುದಾನ ರಹಿತ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ನೌಕರರು ಅನುದಾನ ರಹಿತವಾಗಿ ನೇಮಕಗೊಂಡ ನೌಕರರಾಗಿದ್ದು ಈ ನೌಕರರುಗಳಿಗೆ ಸರ್ಕಾರದಿಂದ ವೇತನಾನುದಾನ ನೀಡುತ್ತಿರುವುದಿಲ್ಲ. ಇವರುಗಳಿಗೆ ಆಡಳಿತ ಮಂಡಳಿಯ ಸಂಪನ್ಮೂಲದಿಂದ ವೇತನವನ್ನು ನೀಡಲಾಗುತ್ತಿದೆ.

ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನ ರಹಿತ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ಸೇವಾ ಷರತ್ತು ಮತ್ತು ನಿಯಮಗಳು) 2005ರ ನಿಯಮಗಳಂತೆ ಖಾಸಗಿ ಅನುದಾನರಹಿತ ಶಾಲೆಗಳಲ್ಲಿನ ಸಿಬ್ಬಂದಿಗಳಿಗೆ ಶಾಲೆಯ ಆಡಳಿತ ಮಂಡಳಿಗಳು ಕೆಳಕಂಡಂತೆ ಸೇವಾ ಭದ್ರತೆ/ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಬೇಕಾಗಿದೆ.

ಅ) ನಿಯಮ-3(ಬಿ) ರನ್ವಯ ಅನುದಾನರಹಿತ ಶಾಲೆಗಳಲ್ಲಿನ ಸಿಬ್ಬಂದಿಗಳಿಗೆ ವೇತನವನ್ನು ತತ್ಸಮಾನ ಸರ್ಕಾರಿ ಸೇವೆಯಲ್ಲಿನ ಸಿಬ್ಬಂದಿಗಳ ಕನಿಷ್ಠ ಮೂಲ ವೇತನಕ್ಕೆ ಸಮನಾದ ವೇತನವನ್ನು ನೀಡಬೇಕು.

ಆ) ನಿಯಮ-4ರನ್ವಯ ಅನುದಾನರಹಿತ ಶಾಲಾ ಸಿಬ್ಬಂದಿಗಳಿಗೆ ರಜಾ ಸೌಲಭ್ಯಗಳನ್ನು ನೀಡಬೇಕು.

ಇ) ನಿಯಮ-5ರನ್ವಯ ಅನುದಾನರಹಿತ ಶಾಲಾ ಸಿಬ್ಬಂದಿಗಳ ತಖ್ತೆ: ಹಾಗೂ ಸೇವಾ ಪುಸ್ತಕವನ್ನು ನಿರ್ವಹಿಸಬೇಕು.

ಈ) ನಿಯಮ-5ರನ್ವಯ ಅನುದಾನರಹಿತ ಶಾಲಾ ಸಿಬ್ಬಂದಿಗಳಿಂದ ಶಾಲೆಯ ಆಡಳಿತ ಮಂಡಳಿಯವರು ಒತ್ತಾಯ ಪೂರ್ವಕವಾಗಿ ದಿನಾಂಕ ನಮೂದಿಸದೇ ರಾಜೀನಾಮೆ ಪತ್ರವನ್ನು ಪಡೆಯತಕ್ಕದ್ದಲ್ಲ.

-2-

2) ಖಾಸಗಿ ಅನುದಾನರಹಿತ ಶಾಲೆಗಳ ಸಿಬ್ಬಂದಿಗಳಿಗೆ ಶಾಲೆಗಳ ಆಡಳಿತ ಮಂಡಳಿಯವರು ಕರ್ನಾಟಕ ಶಿಕ್ಷಣ ಕಾಯಿದೆಯ-1983ರ ಸೆಕ್ಷನ್- 89 ಮತ್ತು 90 ರಲ್ಲಿ ಪ್ರಸ್ತಾಪಿಸಿರುವಂತೆ ಅಗತ್ಯ ಸೇವಾ ಸೌಲಭ್ಯಗಳನ್ನು ಒದಗಿಸದೇ ನಿಯಮಗಳನ್ನು ಉಲ್ಲಂಘಿಸಿದ ಶಾಲೆಗಳ ವಿರುದ್ಧ ವಿಚಾರಣೆಯನ್ನು ನಡೆಸಿ ದಂಡ ವಿಧಿಸುವ ಅಧಿಕಾರವನ್ನು ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ (DERA) ಕ್ಕೆ ನೀಡಲಾಗಿದ್ದು, ಈ ಸಂಬಂಧ ಕರ್ನಾಟಕ ಶಿಕ್ಷಣ ಕಾಯಿದೆಗೆ ಕೆಳಕಂಡಂತೆ ತಿದ್ದುಪಡಿ ತಂದು ಹೊಸದಾಗಿ ಸೆಕ್ಷನ್ 125(ಎ) ಅನ್ನು ಸೇರ್ಪಡೆ ಮಾಡಲಾಗಿದ್ದು ವಿವರ ಕೆಳಕಂಡಂತಿದೆ.

> "125A. Penalty for contravention of section 88, 89 and 90.- Any educational institution is found guilty of contravention of either of sections 88, 89 and 90 in an enquiry conducted, after giving an opportunity of being heard, by District Education Regulatory Authority, it shall impose a penalty which may extend to five lakh rupees."

3) ರಾಜ್ಯ ಎಲ್ಲಾ ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೇವಾ ಭದ್ರತೆಯನ್ನು ಒದಗಿಸದ ಶಾಲೆಗಳ ಆಡಳಿತ ಮಂಡಳಿಗಳ ವಿರುದ್ಧ ಕರ್ನಾಟಕ ಶಿಕ್ಷಣ ಕಾಯಿದೆ ಸೆಕ್ಷನ್-125(ಎ) ರಂತೆ ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ(DERA)ದಲ್ಲಿ ಪ್ರಕರಣ ದಾಖಲಿಸಿ ನಿಯಮಾನುಸಾರ ಕ್ರಮಕೈಗೊಳ್ಳುವಂತೆ ಸುತ್ತೋಲೆ ಹೊರಡಿಸಲಾಗಿದೆ. ಮುಂದುವರೆದು, ಸರ್ಕಾರದ ಆದೇಶಗಳನ್ನು ಅನುಷ್ಠಾನಗೊಳಿಸದೆ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ದೂರುಗಳು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುತ್ತಿದೆ.

4) ಅನುದಾನಿತ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕ ಮತ್ತು ಬಿಸಿ ಊಟ ಸೌಲಭ್ಯವನ್ನು ನೀಡಲಾಗುತ್ತಿದೆ. ಅನುದಾನ ರಹಿತ ಖಾಸಗಿ ಶಾಲೆಗಳ ವಿದ್ಯಾರ್ಥಿಗಳಿಗೆ ಈ ಉಚಿತ ಸೌಲಭ್ಯವನ್ನು ನೀಡಲಾಗುತ್ತಿಲ್ಲ.

**ಇಪಿ 238 ಎಸ್ಇಎಸ್ 2023**

(ಎಸ್. ಮಧುಬಂಗಾರಪ್ಪ)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು